ನನಗೂ ನಿಮ್ಮಮ್ಮಂಗೂ ಮದುವೆ ಮಾಡಿಸಿದ್ದು.'

ಚಿನ್ನು ಕಣ್ಣರಳಿಸಿಕೊಂಡು ಕೇಳಿಸಿಕೊಂಡಳು. ಯಾರಿಗೆ ತಾನೇ, ತಾನು ಭೂಮಿಯಲ್ಲಿ ಅವತರಿಸಿದ ಹಿಂದಿನ ಮರ್ಮ ಕುತೂಹಲ ಹುಟ್ಟಿಸುವುದಿಲ್ಲ? ಚಿನ್ನು ಹ್ಞಾಂಹ್ಞೂಂಗುಟ್ಟುತ್ತ, ಆಮೇಲೆ ಆಮೇಲೇನಾಯಿತು... ಎಂದು ಕೌತುಕಿಸುತ್ತ ಕೇಳಿಸಿಕೊಂಡಳು.

ಶೇಷೂ ತಾತ, ಓರಗೆಯಲ್ಲಿ ನನ್ನ ಅಮ್ಮನಿಗೆ ದೊಡ್ಡಪ್ಪನಾಗಬೇಕು. ಅಂದರೆ ಅವರ ಹೆಂಡತಿಯೂ, ನನ್ನ ಅಮ್ಮನ ಅಮ್ಮನೂ ಅಕ್ಕತಂಗಿಯರು. ಶೇಷೂ ತಾತ ನೀಲಿಯ ತಂದೆ ಶ್ರೀಕಂಠಯ್ಯನವರ ಸುಪರ್ದಿಯಲ್ಲಿ ಕಾರಕೂನಿಕೆ ನಡೆಸುತ್ತಿದ್ದವರು. ಶ್ರೀಕಂಠಯ್ಯ, ಅಂದರೆ ನನ್ನ ಮಾವ ರಾಜ್ಯಸರ್ಕಾರದ ಫಿಷರೀಸ್ ಇಲಾಖೆಯಲ್ಲಿ ದೊಡ್ಡ ಹುದ್ದೆಯಲ್ಲಿದ್ದವರು. ಅವರಿಗೂ, ಇವರಿಗೂ ಯಾವ ಗಳಿಗೆಯಲ್ಲಿ ಹೀಗೊಂದು ಸಂಬಂಧ ಕುದುರಿಸುವ ಇರಾದೆಯಾಯಿತೋ, ಯಾರಿಗೆ ಗೊತ್ತು? ಒಟ್ಟಿನಲ್ಲಿ, ಹಣೆಬರಹ ಜರುಗಿಹೋಯಿತು!

ಅಮ್ಮ ನನ್ನ ಸಲುವಾಗಿ ಸಾಕಷ್ಟು ಹೆಣಗಿದ್ದಳು. ನಾನು ಪಿಯುಸಿಗೆ ಬರುವ ಹೊತ್ತಿಗೆಲ್ಲ ನನ್ನ ಅಪ್ಪ ತೀರಿಕೊಂಡರು. ಗಂಡುದಿಕ್ಕಿರದ ಮನೆ... ಒಬ್ಬಳೇ ಮಗಳು... ಧಗಾಕೋರರಿಗೆ ಹೇಳಿಮಾಡಿಸಿದ ನಗರ... ಇವೆಲ್ಲದರ ನಡುವೆ, ಒಬ್ಬಳೇ ಏಗಿ ಏಗಿ, ನನಗೊಂದು ಬದುಕು ಕಟ್ಟಿದಳು. ಅಪ್ಪ ಹೋದ ಬಳಿಕ ನಮ್ಮತ್ತ ಸುಳಿಯದೆ ದೂರವಿದ್ದವರೆಲ್ಲ ನಾನು ಬಿಎಸ್ಸೀ ಮುಗಿಸಿದ ಸುಮಾರಿನಲ್ಲಿ, ಮಾಗುವ ಹಣ್ಣಿಗೆ ಕಾಯುವ ಹುಳುಗಳ ಹಾಗೆ, ಒಂದಲ್ಲೊಂದು ಸಬೂಬು ಹೇಳಿ ಮನೆಗೆ ಬರತೊಡಗಿದರು. ಶೇಷೂ ತಾತನೂ ಇದ್ದಕ್ಕಿದ್ದಂತೆ ಆಗೀಗ ಬಂದು ಅಮ್ಮನನ್ನು ಕಾಣುವರು. ನನ್ನೆಲ್ಲ ಏನು–ಎತ್ತ... ಇತ್ಯಾದಿ ವಿಚಾರಿಸುವರು. ಆ ದಿನಗಳಲ್ಲಿ ಅಮ್ಮ ನನಗೊಂದು ಗಂಡು ಗೊತ್ತುಮಾಡಲು ಸುಮಾರು ಹೆಣಗಿದ್ದಳು. ಕಂಡಕಂಡವರಿಗೆಲ್ಲ ಜಾತಕದ ಕ್ಸೆರಾಕ್ಸು ಹಂಚಿದ್ದಳು... ಇನ್ನು, ನೀಡುವವರೂ ಬೇಡುವವರೂ ಒಂದೆಡೆ ಸಂದುವುದೇ ಒಂದು ಪವಾಡವಷ್ಟೆ? ಹೀಗೊಂದು ಮಹಾತ್ಮೆಯೇ ಮೊದಲಾಯಿತು.

ನಾನು ಓದು ಮುಗಿಸಿ, ಆಗಷ್ಟೇ ಮೈಸೂರಿನ 'ಸಿಎಫ್ಟೀಆರೈ'ನಲ್ಲಿ ಕೆಲಸಕ್ಕೆ ಸೇರಿದ್ದೆ. ಕ್ಯಾಂಪಸಿನಲ್ಲೇ ಮನೆ ಮಾಡಿಕೊಂಡು ಇದ್ದೆ. ವಾರಕ್ಕೊಮ್ಮೆ ಬಂದು ಅಮ್ಮನನ್ನು ಕಂಡುಹೋಗುತ್ತಿದ್ದೆ. ಒಂದು ಶನಿವಾರ, ಎಂದಿನಂತೆ ಬೆಂಗಳೂರಿಗೆ ಬರುವ ಹೊತ್ತಿಗೆ ಶೇಷೂ ತಾತ, ಶ್ರೀಕಂಠಯ್ಯನವರೊಡನೆ ಬಂದು, ಅಮ್ಮನೊಡನೆ ಮದುವೆಯ ನಿಷ್ಕರ್ಷೆಯಲ್ಲಿ ತೊಡಗಿದ್ದರು. ವಿಷಯವೇನೆಂದು ನನಗೆ ಗೊತ್ತಾಗುವ ಮೊದಲೇ ಮೂವರ ಮಾತು ಫಲಿಸಿಬಿಟ್ಟಿತ್ತು. ನನ್ನನ್ನೊಂದು ಮಾತು ಸಹ ಕೇಳದೆಯೇ ಅಮ್ಮ ಸೈಯೆಂದಿದ್ದಳು! ತನ್ನ ದೊಡ್ಡಪ್ಪನ ಮೇಲಿನ ಹಳೆಯ ಮುಲಾಜಿಗೆ ಸಿಕ್ಕಿ ಒಪ್ಪಿಬಿಟ್ಟಿದ್ದಳು!!

ನನ್ನ ಅಪ್ಪ ಸತ್ತ ಕಾಲಕ್ಕೆ, ಶೇಷೂ ತಾತ, ತಾವಾಗಿಯೇ ಒಮ್ಮೆ ಬಂದು ಒಂದು ಸಾವಿರ ದುಡ್ಡು ಕೊಟ್ಟು, 'ಇಟ್ಟುಕೋ... ವಾಪಸು ಕೊಡೋದೇನೂ ಬೇಡ...' ಅಂದಿದ್ದರಂತೆ. ಆ ಕಾಲದ ಸಾವಿರ ರೂಪಾಯಿಗೆ ಇವೊತ್ತಿನ ಲಕ್ಷಕ್ಕೂ ಹೆಚ್ಚು ದಾಮು ತಾನೇ? ಅಮ್ಮ, ಈ ಒಂದು ಹಳೆಯ ದಾಕ್ಷಿಣ್ಯ ಒಳಗಿಡುಕಿಕೊಂಡು ಒಲ್ಲೆನ್ನಲಾಗದೆ ಒಪ್ಪಿಬಿಟ್ಟಳು. ಒಂದರ್ಥದಲ್ಲಿ, ನನ್ನ ಮದುವೆಯ ಹಕ್ಕನ್ನು ಸಾವಿರ ದುಡ್ಡಿಗೆ ಶೇಷೂ ತಾತನಿಗೆ ಮಾರಿಬಿಟ್ಟಿದ್ದಳು.

'ನಮ್ಮ ಸಾಹೇಬರ ಮಗ, ಕನಕ... ಒಳ್ಳೇ ಸಂಬಂಧ... ಅವರೂ ಒಪ್ಪಿದ್ದಾರೆ. ಏನಿದ್ದರೂ ನೀನು ಯೆಸ್ಸನ್ನೋದಷ್ಟೆ...' ಶೇಷೂ ತಾತ ಯಜಮಾನರನ್ನು ಕಾರಿನವರೆಗೂ ಬಿಟ್ಟುಬಂದಿದ್ದೇ ನನ್ನೊಡನೆ ಮಾತಿಗಿಳಿದರು. ಈ ಪರಿಯ ಮದುವೆಗೆ ನಾನು ಸಿದ್ಧವೇ ಇರಲಿಲ್ಲ. ಆಗಷ್ಟೇ ಕೆಲಸಕ್ಕೆ